ರೈತರ ಬೆಳೆಗಳಿಗೆ ಬೆಲೆ ನಿಗದಿ

15(81); ಶ್ರೀ ಬಾಲಕೃಷ್ಣ ಸಿ.ಎನ್

ಅ) ರೈತರ ಉತ್ಪನ್ನಗಳಿಗೆ ವೈಜ್ಞಾನಿಕ ಪದ್ಧತಿಯಲ್ಲಿ ಬೆಲೆ ನಿಗದಿಪಡಿಸಲು ಸರ್ಕಾರವು ಕ್ರಮ ಜರುಗಿಸದಿರಲು ಕಾರಣಗಳೇನು;

ಆ) ರೈತರು ಸಂಕಷ್ಟದಲ್ಲಿದ್ದಾಗ ಕೆಲವೊಮ್ಮೆ ಕನಿಷ್ಟ ಪ್ರಮಾಣದಲ್ಲಿ ನಿರ್ದಿಷ್ಟ ಬೆಳೆಗಳಿಗೆ ಅವೈಜ್ಞಾನಿಕ ಬೆಂಬಲ ಬೆಲೆ ನೀಡಿ ತಾತ್ಕಾಲಿಕ ಪರಿಹಾರ ಒದಗಿಸುವ ಸರ್ಕಾರ ಖಾಯಂ ಆಗಿ ಬೆಳೆಗಳಿಗೆ ಬೆಲೆ ನಿಗದಿಪಡಿಸುವ ಕುರಿತು ಕ್ರಿಯಾ ಯೋಜನೆಯನ್ನು ರೂಪಿಸಲು ಕ್ರಮ ಜರುಗಿಸುವುದೇ;

ಇ) ಕಳೆದ ಮೂರು ವರ್ಷಗಳಲ್ಲಿ ಬೆಂಬಲ ಬೆಲೆ ನಿಗದಿಪಡಿಸಿ ನೆರವು ನೀಡಿದ ಮತ್ತು ಆ ಉದ್ದೇಶಕ್ಕಾಗಿ ಮಂಜೂರು ಮಾಡಿದ ಆರ್ಥಿಕ ನೆರವಿನ ವಿವರಗಳೇನು?

ಶ್ರೀ ಕೃಷ್ಣಬೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಸರ್ಕಾರವು ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ನಿಗಧಿಗೊಳಿಸಲು ಕ್ರಮಗಳನ್ನು ಜರುಗಿಸಿದೆ. ಅನೇಕ ಸಂದರ್ಭಗಳಲ್ಲಿ ಹಲವಾರು ಬೆಳೆಗಳ ಉತ್ಪನ್ನ ಒಮ್ಮೆಗೆ ಮಾರುಕಟ್ಟೆಗೆ ಬಂದಾಗ ಬೆಲೆಗಳು ಕುಸಿಯುವ ಸಂದರ್ಭಗಳು ಇದ್ದು ಆ ಸಮಯದಲ್ಲಿ ಸರ್ಕಾರಿ ಮಧ್ಯೆ ಪ್ರವೇಶಿಸಿ ಬೆಂಬಲ ಬೆಲೆಗೆ ಮಾರುಕಟ್ಟೆಯಲ್ಲಿ ಉತ್ಪನ್ನಗಳನ್ನು ಖರೀದಿಸಿ ಬೆಲೆ ಸ್ಥಿರೀಕರಣವಾಗಲು ಕ್ರಮ ತೆಗೆದುಕೊಂಡಿರುತ್ತದೆ.

ರಾಜ್ಯದಲ್ಲಿ ಬೆಳೆಯುವ ವಿವಿಧ ಕೃಷಿ ಬೆಳೆಗಳ ನಿರ್ವಹಣೆ ವೆಚ್ಚದ ಬಗ್ಗೆ ಅಧ್ಯಯನ ಮಾಡಿ, ಕೇಂದ್ರ ಸರ್ಕಾರದ ಕೃಷಿ ಬೆಲೆ ಹಾಗು ವೆಚ್ಚದ ಆಯೋಗಕ್ಕೆ ವೈಜ್ಞಾನಿಕ ಬೆಲೆ ನಿಗದಿಪಡಿಸಲು ಶಿಫಾರಸ್ಸು ಮಾಡಲಾಗುತ್ತದೆ. ಇದರ ಅನ್ವಯ ಕೇಂದ್ರ ಸರ್ಕಾರದ ಕೃಷಿ ಬೆಲೆ

ಹಾಗೂ ವೆಚ್ಚದ ಆಯೋಗವು ಪ್ರತಿ ಹಂಗಾಮಿಗೆ ಬೆಂಬಲ ಬೆಲೆ ನಿಗದಿಪಡಿಸುತ್ತದೆ.

ಆ) ಕೇಂದ್ರ ಸರ್ಕಾರವು ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ನಿಗಧಿಪಡಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಹಲವಾರು ಬೆಳೆಗಳ ಉತ್ಪನ್ನ ಒಮ್ಮೆಗೆ ಮಾರುಕಟ್ಟೆಗೆ ಬಂದಾಗ ಬೆಲೆಗಳು ಕುಸಿಯುವ ಸಂದರ್ಭಗಳು ಇದ್ದು ಆ ಸಮಯದಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸಿ ಬೆಂಬಲ ಬೆಲೆಗೆ ಮಾರುಕಟ್ಟೆಯಲ್ಲಿ ಉತ್ಪನ್ನಗಳು ಖರೀದಿಸಿ ಬೆಲೆ ಸ್ಥಿರೀಕರಣವಾಗಲು ಕ್ರಮ ತೆಗೆದುಕೊಂಡಿರುತ್ತದೆ.

ರಾಜ್ಯ ಸರ್ಕಾರವು ರೈತರಿಗೆ ಲಾಭದಾಯಕ ಬೆಲೆ ನೀಡುವ ಸಲುವಾಗಿ ಕೃಷಿ ಬೆಲೆ ಆಯೋಗ ರಚನೆ ಕಾರ್ಯ ಪ್ರಾರಂಭಿಸಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಆವರ್ಥ ನಿಧಿಯಿಂದ ವಿವಿದ ಕೃಷಿ/ತೋಟಗಾರಿಕಾ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಲ್ಲಿ ಖರೀದಿಸಲು ಬಿಡುಗಡೆ ಮಾಡಿದ ವಿವರಗಳು ಈ ಕೆಳಗಿನಂತಿವೆ.

₹ ಕೋಟಿಗಳಲ್ಲಿ

ಉತ್ಪನ್ನಗಳ ವಿವರ	2011–12	2012–13	2013–14
ಭತ್ತ & ಮೆಕ್ಕೆಜೋಳ	0	0	270.00
ಭತ್ತ	77.00	500	0.44
ತೊಗರಿ	12.00	35.00	20.00
ಉದ್ದು	0	5.00	0.00
ಕೊಬರಿ	0	8.00	80.00
ಈರುಳ್ಳಿ	19.00	6.74	0.00
ಟೊಮೋಟೋ	0.05	0.025	0.00
ಕಡಲೇಕಾಯಿ & ಸೂರ್ಯಕಾಂತಿ	0	0	10.00
ತೆಂಗಿನಕಾಯಿ	0	0.30	0.50
ಅರಿಷಿಣ	1.00	30.02	0.00
ಮಾವು	0	0.10	0.00
ಒಟ್ಟು	109.05	90.185	380.94